ಶ್ರೀ ಎಂ.ಎಸ್. ಕೃಷ್ಣನ್.—ನಮಗೆ ಗೊತ್ತಿರುವ ಹಾಗೆ ಗೊರುಗುಂಟೆ ಪಾಳ್ಯದಲ್ಲಿ ಟ್ರಸ್ಟ್ ಬೋರ್ಡ್ ಜಾಗವೂ ಇದೆ; ಕೆ.ಎಸ್.ಆರ್.ಟಿ.ಸಿ. ಜಾಗವೂ ಇದೆ. ನಮ್ಮ ಬಸ್ಸುಗಳು ಅಲ್ಲಿಯತನಕ ಓಡಾಡುತ್ತಿವೆ ಅಲ್ಲಿ ಸ್ಕೂಲುಗಳು ಇಲ್ಲದೇ ಇರುವುದರಿಂದ ಸಂಬಂಧಪಟ್ಟ ಜಮೀನಿನ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಸೆಟ್ಲ್‌ಮೆಂಟ್ ಆಫೀಸರ್‌ರವರಿಗೆ ಕೊಟ್ಟಿರುವ ಆದೇಶವನ್ನು ವಾಪಸು ತೆಗೆದು ಕೊಂಡು ಸ್ಕೂಲಿಗೆ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ ?

1-30 P.M

ಶ್ರೀ ಎನ್. ಹುಚ್ಚಮಾಸ್ತಿಗೌಡ —ಇದು ಸರ್ಕಾರ ಕರ್ನಾಟಕ ಸಾರಿಗೆ ಸಂಸ್ಥೆಗಾಗಿ ಆಕ್ಕ್ವೈರ್ ಮಾಡಿರುವ ಜಮೀನು. ಸಾರಿಗೆ ಸಂಸ್ಥೆಯವರು ಬೇರೆ ಕಡೆ ಕೇಳಿದರೆ ಸಾಧ್ಯವೇ ಹೊರತು, ಇದನ್ನು ಕೊಡುವುದಕ್ಕಾಗುವುದಿಲ್ಲ. ಆದರೂ ಮಾನ್ಯ ಸದಸ್ಯರು ಇದರ ಅವಶ್ಯಕತೆ ಬಗ್ಗೆ ಹೇಳುವುದರಿಂದ ನನ್ನ ಅಭಿಪ್ರಾಯವನ್ನು ಸಾರಿಗೆ ಸಂಸ್ಥೆಯವರಿಗೆ ಬರೆದು ತಿಳಿಸಿ, ಅದನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವೇ ಎಂದು ತಿಳಿಸುತ್ತೇನೆ; ಅವರು ಒಪ್ಪಿಕೊಂಡರೆ ನನ್ನ ಅಡ್ಡಿ ಏನೂ ಇಲ್ಲ.

ಶ್ರೀ ಎಂ ಎಸ್ ಕೃಷ್ಣನ್ —ಒಂದು ಸಂತೋಷ ಅವರು ತಿಳಿಸುತ್ತೇನೆ ಎಂದು ಹೇಳಿದ್ದಾರೆ. ಅದರ ಜೊತೆಯಲ್ಲಿ ಅಜಮಾಯಿಷಿ ಮಾಡಿದರೆ ಒಳ್ಳೆಯದು ಏಕೆಂದರೆ ಆ ಜಮೀನು ಬಸ್ ನಿರ್ವಾಣಕ್ಕೆ ಉಪಯೋಗವಾಗುವುದಿಲ್ಲ ಬಿ.ಡಿ.ಎ. ಕೊಟ್ಟಿರುವ ಜಮೀನು ಇದೆ ; ಆದುದರಿಂದ ಇದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರ ಸಲಹೆ ಪ್ರಕಾರ ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ ಮತ್ತು ಥೇರ್ಮನ್‌ರವರಿಗೆ ತಿಳಿಸಿ ಸ್ಥಳ ಅಜಮಾಯಿಸಿ ಮಾಡಿ ಕೂಡಲೇ ತಿಳಿಸುತ್ತೇನೆ.

Shifting of Central Jail

330. SRI T.R. SHAMANNA (Fort).—Will the Chief Minister be pleased to state.—

(*a*) whether there is any proposal to shift the Central Jail from the present placee ;

(*b*) if so, when and where it will be shifted ?

SRI D. DEVARAJ URS (Chief Minister).—

(*a*) Yes.

(*b*) The matter is being examined further.

ಶ್ರೀ ಟಿ. ಆರ್. ಶಾಮಣ್ಣ,— ಸೆಂಟ್ರಲ್ ಜೈಲ್ ಕಟ್ಟಿಸಿದಾಗ ಅದು ಬೆಂಗಳೂರಿನಿಂದ ಹೊರಗಡೆ ಇತ್ತು, ಇವತ್ತು ಅದು ಮಧ್ಯ ಇರುವುದರಿಂದ ಅವಘಡ ಜಾಗ್ರತೆ ಹೊರಗೆ ಕಳುಹಿಸುವುದು ಸೂಕ್ತ ಅಲ್ಲವೇ ?

† ಶ್ರೀ ಡಿ. ದೇವರಾಜ ಅರಸ್ —ಹೌದು ಒಪ್ಪಿಕೊಳ್ಳುತ್ತೇನೆ ಸೂಕ್ತ.

ಶ್ರೀ ಟಿ. ಆರ್. ಶಾಮಣ್ಣ.— ಹಿಂದೆ ಸರ್ಕಾರದವರು ತೆರೆದ ಬಂದೀಖಾನೆಗಳನ್ನು ಮಾಡಿದ್ದಾರೆ. ಈಗಲೂ ಮಾಡುವುದಕ್ಕೆ ಸಾಧ್ಯವೇ ?

SRI D. DEVARAJ URS.— Open jail is a big experiment. So far as shifting the Central Jail concerned, there is necessity to shift it, we accept it.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಉತ್ತರಕೊಡುತ್ತಾ, ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದಿರಿ. ಇದು ಯಾವ ಘಟ್ಟದಲ್ಲಿ ಇವೆ ಜಾಗ ಏದಾದರೂ ನೋಡಿದ್ದೀರಾ ? ಖರ್ಚು ಏನಾದರೂ ಮಾಡಿದ್ದೀರಾ ? ಪ್ಲಾನ್ ಮಾಡಿನಿ್ದೀರಾ ? ದಯವಿಟ್ಟು ವಿವರ ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.— ಇದು ಸುಮಾರು 1941ನೇ ಇನವಿುಂದ ಇದೆ. ಆಗ್ಗೆ 130 ಎಕರೆ ಭೂವಿುಯನ್ನು ಬೈರಸಂದ್ರದ ಹಳ್ಳಿಯಲ್ಲಿ ತೆಗೆದುಕೊಂಡಿದ್ದೆವು. ಇತ್ತೀಚೆಗೆ ಅಲ್ಲದ್ದ ಭೂವಿು ಯನ್ನೆರಾ ಇನಿಸ್ಟಿಟ್ಯೂಷನ್‌ಗಳಿಗೆ ಕೊಟ್ಟಿದ್ದಾರೆ.ಅಲ್ಲ ಭೂವಿು ಉಳಿದಿಲ್ಲ. ಈಗ62 ಎಕರೆ 14ಗುಂಟೆ ಯನ್ನು ರೆವಿನ್ಯೂ ಇಲಾಖೆಯವರು ಬೆಂಗಳೂರು ದಕ್ಷಿಣ ತಾಲ್ಲೂಕು ಸೆಡವ್ಷನ ಅಗ್ರಹಾರದಲ್ಲ ಪ್ರಿನನ್ಸ್ ಡಿಪಾರ್ಟ್‌ಮೆಂಟಿಗೆ ಕೊಟ್ಟಿದ್ದಾರೆ.

ಶ್ರೀ ಕೋಣಂದರೂರು ಲಿಂಗಪ್ಪ.—ಸೆಂಟ್ರಲ್ ಜೈಲನ್ನು ಹೊರಗಡೆ ಹಾಕಿದ ಮೇಲೆ ಆ ಜಾಗ ವನ್ನು ಮುಂದೆ ಏನು ಮಾಡಬೇಕೆಂದು ಯೋಚನೆ ಮಾಡಿದ್ದೀರಾ ? ತೆರದ ಬಾವೀಖಾನೆಗಳನ್ನು ನ್ವಂತಕ್ಕೆ ಇಟ್ಟುಕೊಳ್ಳುತೀರಾ ?

ಶ್ರೀ ಡಿ. ದೇವರಾಜ ಅರಸ್.—ನೀವು ನಾವು ಇರುವುದಕ್ಕೆ ಇಟ್ಟುಕೊಳ್ಳೋ್ದೇ ಈಗ ತಮು ಗೆಲ್ಲಾ ಗೊತ್ತಿರುವ ಹಾಗೆ ಸೆಂಟ್ರಲ್ ಜೈಲ್ ನುತ್ತ ಇನಿಸಿಟ್ಯೂಷನ್ ಇವೆ ? ಅದನ್ನು ಎಜುಕೇಷನ್ ಇನಿಸ್ಟಿಟೂಷನ್‌ಗೆ ಉಪಯೋಗಿನಬಹುದು ಎಂದು ನನ್ನ ಭಾವನೆ ಇದರ ಬಗ್ಗೆ ಆ ಮೇಲೆ ಕುಳಿತು ನೋಡೋಣ. ಖಾನಗೀಯವರಿಗೆ ಕೊಡುವ ಪ್ರಶ್ನೆ ಇಲ್ಲವೇ ಇಲ್ಲ ? ಅದನ್ನು ಮಾತ್ರ ನ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಪ್ರವೇಟ್ ಹದ್ದುಗಳು ಕಾಯುತ್ತಿವೆ.

SRI D. DEVARAJ URS.— I can here and now assure this house, that so far as this government is concerned, we are not interested in giving even a bit of land to any private persons.

City Survey office at Chikodi

342 SRI J. S AMMANNAWAR (Sadalga).— Will the Minister for Revenue be pleased to state :—

(*a*) whether the City Survey office at Chikodi has been sanctioned by the Government ;

(*b*) If so, the date from which the said office is functioning ;

(*c*) if not, when it will start functioning ?

SRI N. HUTCHAMASTHY GOWDA (Minister for Revenue.)—

(*a*) No,

(*b*) Does not arise in view of reply to clause (*a*)

(*c*) Under consideration of Government.

ಶ್ರೀ ಜೆ ಎಸ್. ಅಮ್ಮಣ್ಣವರ್.— ಚಿಕ್ಕೋಡಿಯಲ್ಲಿ ಎಂಟು ತಿಂಗಳಮುಟ್ಟಿಗೆ ಸರ್ವೆ ಆಫೀಸ್ ಬಂದಿದ್ದು ? ಅದು ಹಾಗೆಯೇ ಹೋಯಿತು. ಇದು ಯಾವ ಸರ್ವೆ ಆಫೀಸ್ ಎಂದು ಹೇಳುತ್ತೀರಾ ?

† ಶ್ರೀ ಎನ್ ಹುಚ್ಚಮಾಸ್ತಿಗೌಡ.— ಎಎಸ್ಎರ್ಆರ್. ಆಫೀಸುಗಳನ್ನು ಪ್ರತಿಯೊಂದು ಸಬ್ ಡಿವಿಜನ್‌ನಲ್ಲಿಯೂ ಮಾಡಬೇಕೆಂದು ಇತ್ತು ? ಆ ಪ್ರಕಾರ ಅಲ್ಲಿ ಆಫೀಸನ್ನು ತೆರೆಯರಾಗಿತ್ತು ಕೆಲಸ ಬೇರೆ ಕಡೆ ಜಾಸ್ತಿಯಿದ್ದುದರಿಂದ ವರ್ಗ ಮಾಡರಾಗಿದೆ

ಶ್ರೀ ಜೆ. ಎಸ್. ಅಮ್ಮಣ್ಣವರ್.— ಪುನ: ಅಲ್ಲಿಗೆ ಹಾಕುತ್ತೀರಾ ?